ಕರ್ನಾಟಕ ವಿಧಾನ ಸಭೆ

ಸೋಮವಾರ 16ನೇ ಮಾರ್ಚ್ 1998ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : ಶ್ರೀ ರಮೇಶ್‌ಕುಮಾರ್ ಅವರು, ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು:-

ನಿಲುವಳಿ ಸೂಚನೆ ಪ್ರಸ್ತಾಪ

ಸಭೆಯು 11 ಗಂಟೆ 18 ನಿಮಿಷಗಳಿಗೆ ಸಮಾವೇಶಗೊಂಡಿತು.

(ಅ) ಶಿವಮೊಗ್ಗ ಸಕ್ಕರೆ ಕಾರ್ಖಾನೆ ನಿಂತುಹೋಗಿರುವ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯಸಭಾಧ್ಯಕ್ಷರೆ, ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆ ನಿಂತು ಎರಡು ವರ್ಷಗಳಾಗಿದೆ. ಅದರ ಬಗ್ಗೆ ಚರ್ಚೆ ಮಾಡಲು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಈಗಾಗಲೇ ಅನೇಕ ಕಾರ್ಮಿಕರು ಸಾಯುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟು 45 ದಿವಸಗಳಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡಿಕೊಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು:- ತಾವು ನನಗೂ ಬಂದು ಹೇಳಿದ್ದೀರಿ. ನೋಟೀಸ್ ಇದೆ, ಎಲ್ಲ ಇನ್‌ಫರ್ಮೇಶನ್ ತರಿಸಿದ್ದಾರೆ. ಇದರ ಬಗ್ಗೆ ನಿಲುವಳಿ ಸೂಚನೆ ಬೇಡ, ಬೇರೆ ರೂಪದಲ್ಲಿ ಇದನ್ನು ತೆಗೆದುಕೊಳ್ಳುತ್ತೇನೆ. ಇವತ್ತೇ ತೆಗೆದುಕೊಳ್ಳುತ್ತೇನೆ.

(ಆ) ಬೆಂಗಳೂರು ನಗರ ಸಾರಿಗೆ ಬಸ್ ನೌಕರ ಮುಷ್ಕರದಿಂದ ಉಂಟಾಗಿರುವ ತೊಂದರೆ.

+ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ):- ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಸಂಚಾರ ದಿಢೀರ್ ಮುಷ್ಕರದಿಂದ ಜನರಿಗೆ ತೊಂದರೆಯಾಗಿದೆ.

ಅಧ್ಯಕ್ಷರು:- ತಮ್ಮದು ನೋಟೀಸ್ ಬಂದಿದೆ. ವಿರೋಧಪಕ್ಷದ ನಾಯಕರದೂ ಬಂದಿದೆ. ವಾಟಾಳ್‌ನಾಗರಾಜ್‌ರವರು ನೋಟೀಸ್ ಕೊಟ್ಟಿದ್ದಾರೆ. ಎಲ್ಲಾ ಫಾರ್‌ಮಾಲಿಟೀಸ್‌ನ್ನು ಎರಡು ನಿಮಿಷದಲ್ಲಿ ಮುಗಿಸೋಣ. ಮಾನ್ಯ ಸಾರಿಗೆ ಸಚಿವರಿಗೆ ಆರೋಗ್ಯ ಸರಿಯಿಲ್ಲದ ಪ್ರಯುಕ್ತ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದ್ದಾರೆ.